**VIJAYA KARNATAKA (NAMMA MYSORE)**

Date: Wednesday, March 5, 2014 Page: 1

Edition: Mysore Language: Kannada

### ಮಹಿಳಾ ದೌರ್ಜನ್ಯ-ಪರಿಹಾರ ಸೂಚಿಸುವ 'ಹೂ ಆಮ್ ಐ ?' ಚಿತ್ರ | ಎಸ್‌ಡಿಎಂ-ಐಎಂಡಿಯ ವಿದ್ಯಾರ್ಥಿಗಳ ಸಾಧನೆ

# ವಿದ್ಯಾರ್ಥಿಗಳೇ ರೂಪಿಸಿದ ಕಿರುಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಗರಿ

**ಅರುಣ್ ಕಿಲ್ಲೂರು**, ಮೈಸೂರು

ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚುತ್ತಿದೆ ಎಂದು ಹೇಳುವವರೇ ಎಲ್ಲ ಕಡೆ ಸಿಗುತ್ತಾರೆ. ಆದರೆ ಇದನ್ನು ತಡೆಗಟ್ಟುವುದು ಹೇಗೆ ಎನ್ನುವ ಬಗ್ಗೆ ಗಂಭೀರವಾಗಿ ಆಲೋಚಿಸಿ ಕಾರ್ಯೋನ್ಮುಖರಾದವರು ಕಡಿಮೆ.

ತ್ರಿಳಿ ಸುದ್ದಿ

ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯದ ಬಗ್ಗೆ ಬೆಳಕು ಚೆಲ್ಲಿ ಸಮಸ್ಯೆಗೆ ಪರಿಹಾರ ಸೂಚಿಸಿರುವ ನಗರದ ಎಸ್‌ಡಿಎಂ-ಐಎಂಡಿಯ ವಿದ್ಯಾರ್ಥಿ ಗಳು ಬೋರೋಪ್ಲಸ್ ಅಖಿಲ ಭಾರತ ಮಟ್ಟದ ಕಿರುಚಿತ್ರ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ.

'ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯಕ್ಕೆ ಖುದ್ದು ಮಹಿಳೆಯರೇ ಸೆಟೆದು ನಿಂತು ಪರಿಹಾರ ಕಂಡುಕೊಳ್ಳಬೇಕು. ಮಹಿಳೆಯರ ಬಗ್ಗೆ ಸಮಾಜ ಸೂಕ್ಷ್ಮಾತಿ ಸೂಕ್ಷ್ಮ ಭಾವ ತಾಳಬೇಕು' ಇದು 5 ವಿದ್ಯಾರ್ಥಿಗಳ ತಂಡ ತಯಾರಿಸಿದ 5 ನಿಮಿಷದ 'ಹೂ ಆಮ್ ಐ ?' ಕಿರುಚಿತ್ರದ ಆಶಯ. ಮಹಿಳೆಯರ ಸಮಸ್ಯೆಯ ಸುತ್ತ ಕಟ್ಟಿಕೊಟ್ಟ ಕಿರುಚಿತ್ರದ ಅವಧಿ ಮುನ್ನೂರು ಸೆಕೆಂಡ್ ಮಾತ್ರ. ಆದರೆ ಇದು ವೀಕ್ಷಕರ ಮೇಲೆ ಬೀರುವ ಪರಿಣಾಮ ಅಪಾರ ಎಂದರೆ ತಪ್ಪಲ್ಲ.

ವಿಕ ಚಿತ್ರಲೋಕ



ಬೋರೋಪ್ಲಸ್ ಅಖಿಲ ಭಾರತ ಮಟ್ಟದ ಕಿರುಚಿತ್ರ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದ ನಗರದ ಎಸ್‌ಡಿಎಂ-ಐಎಂಡಿಯ ವಿದ್ಯಾರ್ಥಿಗಳ ತಂಡ.

**ಐವರು ವಿದ್ಯಾರ್ಥಿಗಳ ಸಾಧನೆ:** ಡಿಸೆಂಬರ್ 2012ರಲ್ಲಿ ಹೊಸದಿಲ್ಲಿಯಲ್ಲಿ 'ನಿರ್ಭಯ' ಎನ್ನುವ ಹುಡುಗಿಯ ಮೇಲೆ ನಡೆದ ಅತ್ಯಾಚಾರ ದೊಡ್ಡ ಸುದ್ದಿ ಎಬ್ಬಿಸಿತು. ಯುವ ಮನಸುಗಳು ಘಟನೆಯನ್ನು ಖಂಡಿಸಿ ಭಾರೀ ಪ್ರತಿಭಟನೆ ನಡೆಸಿದವು. ಮನಸನ್ನು ನಿರಂತರವಾಗಿ ಕಾಡಿದ ಆ ಘಟನೆ ಎಸ್‌ಡಿಎಂ-ಐಎಂಡಿಯ ಐವರು ವಿದ್ಯಾರ್ಥಿಗಳನ್ನೂ ಕಾಡಿತು. ಕೊನೆಗೆ ಇದು ಪಡೆದುಕೊಂಡ ರೂಪವೇ 'ಹೂ ಆಮ್ ಐ ?' ಕಿರು ಚಿತ್ರ!

ಬೋರೊಪ್ಲಸ್ ಅಖಿಲ ಭಾರತ ಕಿರುಚಿತ್ರ ಸ್ಪರ್ಧೆ-2014ಕ್ಕೆ ಈ ಬಾರಿ ನಿಗದಿ ಪಡಿಸಲಾದ ವಿಷಯ 'ಮಹಿಳೆಯರ ಮೇಲಿನ ಅಪರಾಧ'. ವರದಕ್ಷಿಣೆ ಕಿರುಕುಳ, ಲೈಂಗಿಕ ದೌರ್ಜನ್ಯ, ವೇತನ ತಾರತಮ್ಯ, ಸಾಂಸ್ಕೃತಿಕ ಪೂರ್ವಪೀಡಿತ ಮನೋಭಾವಗಳನ್ನು ಆಧರಿಸಿದ ಕಿರುಚಿತ್ರಗಳನ್ನು ಸ್ಪರ್ಧೆಗೆ ಆಹ್ವಾನಿಸಲಾಗಿತ್ತು. ಒಟ್ಟು 14 ಚಿತ್ರಗಳನ್ನು ಅಂತಿಮ ಸ್ಪರ್ಧೆಗೆ ಆಯ್ಕೆ ಮಾಡಲಾಯಿತು.

> **ಇದೊಂದು ಕೇವಲ ಕಿರುಚಿತ್ರವಲ್ಲ. ಇದು ಸಮಸ್ಯೆಯ ಸುಳಿಗೆ ಸಿಕ್ಕ 'ನಿರ್ಭಯ' ನಮ್ಮೆಲ್ಲರಿಗೂ ಕೇಳುವ ಪ್ರಶ್ನೆ. ಈ ಪ್ರಶ್ನೆಗೆ ನಾವು ಯಾರಿಗೂ ಉತ್ತರಿಸುವ ಅಗತ್ಯವಿಲ್ಲ. ಆದರೆ ನಮಗೆ ನಾವೇ ಉತ್ತರಿಸಬೇಕಿದೆ. ಇಂಥ ಸಮಸ್ಯೆ ಎಲ್ಲೆಡೆಯೂ ಇದೆ. ಆದರೆ ನಾವು ಈ ಬಗ್ಗೆ ವಾಸ್ತವದ ಕಣ್ಣುಗಳನ್ನು ತೆರೆಯುವ ಅಗತ್ಯವಿದೆ. ಇದೇ ಕಿರುಚಿತ್ರದ ಮೂಲ ಆಶಯ.**
>
> **-ಅಶ್ವಿನ್ ಎಸ್ ಪ್ರಸಾದ್**, ಚಿತ್ರ ತಂಡದ ಸದಸ್ಯ.

ದಿಲ್ಲಿಯ 'ನಿರ್ಭಯ' ಪ್ರಕರಣದಿಂದ ಸಾಕಷ್ಟು ನೊಂದು ಹೋಗಿದ್ದ ಹಿಮಾಂಶು ಸಿಂಗ್ ಗುರ್ಜಾರ್, ಓಂಕಾರ್ ರಾಜ್ಯಗುರು, ಪಿಯೂಷ್ ಕುಮಾರ್, ಆಸ್ತಾ ವ್ಯಾಸ್ ಮತ್ತು ಅಶ್ವಿನ್ ಎಸ್ ಪ್ರಸಾದ್ ಅವರನ್ನು ಒಳಗೊಂಡ ಐವರ ತಂಡ ನಿರ್ಮಿಸಿದ 'ಹೂ ಆಮ್ ಐ ?' ಕಿರುಚಿತ್ರ ಮೊದಲ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದೆ.